ಪುತ್ತೂರು ತಾಲ್ಲೂಕಿನ ದೇವಸ್ಥಾನಗಳಿಗೆ ಹಣ ಬಿಡುಗಡೆ

3030 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪುತ್ತೂರು ತಾಲ್ಲೂಕಿನ ಎಷ್ಟು ದೇವಸ್ಥಾನಗಳಿಗೆ ಮುಜರಾಯಿ ಇಲಾಖೆಯಿಂದ ಈ ವರ್ಷ ಹಣ ಬಿಡುಗಡೆ ಮಾಡಲಾಗಿದೆ, ಬಿಡುಗಡೆ ಮಾಡಿದ ಮೊತ್ತವೆಷ್ಟು?*

ಆ) *ಮುಜರಾಯಿ ಇಲಾಖೆಯ ಅರ್ಚಕ ವೇತನ ಹೆಚ್ಚಿಸುವ ಇರಾದೆ ಸರ್ಕಾರಕ್ಕೆ ಇದೆಯೇ, ಹಾಗಿದ್ದಲ್ಲಿ ಯಾವ ಆಧಾರದಲ್ಲಿ ಇದನ್ನು ಹೆಚ್ಚಿಸಲಾಗುವುದು?*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಈ ಆರ್ಥಿಕ ವರ್ಷದಲ್ಲಿ (1997-98) ಯಾವುದೇ ಅನುದಾನ ಸರಕಾರದಿಂದ ಬಿಡುಗಡೆಯಾಗಿರುವುದಿಲ್ಲ 1996-97ನೇ ಸಾಲಿಗೆ ಪುತ್ತೂರು ತಾಲ್ಲೂಕಿಗೆ ಸಂಬಂಧಿಸಿದಂತೆ 06 ಧಾರ್ಮಿಕ ಸಂಸ್ಥೆಗಳಿಗೆ ಜೀರ್ಣೋದ್ಧಾರಕ್ಕಾಗಿ ಒಟ್ಟು ರೂ. 1,05,000-00 ಅನುದಾನ ಬಿಡುಗಡೆ ಮಾಡಲಾಗಿದೆ.

ಆ) ಆಯಾ ದೇವಾಲಯದ ಆದಾಯಕ್ಕೆ ಅನುಗುಣವಾಗಿ ಅರ್ಚಕರ ವೇತನವನ್ನು ನಿಗಧಿಪಡಿಸಲಾಗುತ್ತಿದೆ.

ದೇವಸ್ಥಾನಗಳಿಂದ ಪಡೆದ ಹಣವನ್ನು ಜನೋಪಯೋಗಿ ಕಾರ್ಯಕ್ರಮಗಳಿಗೆ ಬಳಕೆ

3034 - ಶ್ರೀ ಎಸ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಎಲ್ಲಾ ದೇವಸ್ಥಾನಗಳಿಂದ ಸರ್ಕಾರ ಪಡೆದ ಹಣವೆಷ್ಟು?*

ಆ) *ಆ ಹಣದಲ್ಲಿ ಯಾವ ಯಾವ ಜನೋಪಯೋಗ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗಿದೆ (ಸ್ಥಳವಾರು ದೇವಸ್ಥಾನಗಳಿಂದ ಪಡೆದ ಹಣದ ಬಗ್ಗೆ ಪ್ರತ್ಯೇಕವಾರು ವಿವರ ನೀಡುವುದು)*

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಆಯಾಯ ಪ್ರದೇಶಗಳಲ್ಲಿ ಜಾರಿಯಲ್ಲಿರುವ ಕಾಯಿದೆಗಳಲ್ಲಿ ಅವಕಾಶ ಮಾಡಿ ಕೊಂಡಿರುವಂತೆ ಕೊಡಗು ಜಿಲ್ಲೆ ಹೊರತುಪಡಿಸಿ ದೇವಾಲಯಗಳ ಆಡಳಿತ ನಿರ್ವಹಣೆ ಬಗ್ಗೆ ನೇಮಕಾತಿ ಮಾಡಿಕೊಂಡ ಇಲಾಖಾ ಸಿಬ್ಬಂದಿಗೆ ವೇತನ ಮತ್ತಿತರ ಭತ್ಯೆಯನ್ನು ಭರಿಸಲು ಆಡಳಿತ ನಿರ್ವಹಣಾ ವೆಚ್ಚವನ್ನು ದೇವಾಲಯಗಳಿಂದ ವಸೂಲಿ ಮಾಡಲಾಗುತ್ತದೆ.